ಮೂಲ ದಾವಾ ನಂ. 29/2022

ಪಿ. ಡಬ್ಲುಃ 1

ಸಾಕ್ಷಿಯನ್ನು ದಿನಾಂಕ: 19-08-2023 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಶ್ರೀ ಜಿ. ವಿ. ಎಸ್. ವಕೀಲರಿಂದಃ**

8 ನೇ ಪ್ರತಿವಾದಿ 9 ನೇ ಪ್ರತಿವಾದಿಗೆ ಮಾಡಿಕೊಟ್ಟ ಕ್ರಯದಸ್ತಾವೇಜನ್ನು ನಾನು ನೋಡಿರುತ್ತೇನೆ. ಸದ್ರಿ ಕ್ರಯದಸ್ತಾವೇಜಿನ ಮೂಲಕ ಸರ್ವೆ ನಂ. 2/7ರ ಆಸ್ತಿಯನ್ನು 8 ನೇ ಪ್ರತಿವಾದಿ 9 ನೇ ಪ್ರತಿವಾದಿ ಪರ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದ್ರಿ ಕ್ರಯದಸ್ತಾವೇಜನ್ನು ನಾನು ಓದಿ ನೋಡಿರುತ್ತೇನೆ. ಸದ್ರಿ ದಸ್ತಾವೇಜಿನಲ್ಲಿ ಸದ್ರಿ ಸ್ಥಳ ಖುಲ್ಲಾ ಎಂದು ಬರೆದಿದ್ದು ಅದರಲ್ಲಿ ತೆಂಗಿನ ಗಿಡಗಳು ಮತ್ತು ಶೆಡ್ ಇದೆ. ಸದ್ರಿ ಜಾಗದಲ್ಲಿ ಶೆಡ್ ನನ್ನ ತಾಯಿಯ ಕಾಲದಿಂದಲೂ ಇತ್ತು. ಅದನ್ನು ಕಟ್ಟಲು ಪರವಾನಗಿ ಪಡೆದಿದ್ದೀರಾ ಎಂದರೆ ಸಾಕ್ಷಿ ಅದು ಕೃಷಿ ಶೆಡ್ ಆಗಿತ್ತು ಎಂದು ನುಡಿಯುತ್ತಾರೆ. ಅದಕ್ಕೆ ವಿದ್ಯುತ್ ಸಂಪರ್ಕ ಇರಲಿಲ್ಲ. ಕೆ.ಇ.ಬಿ ಯವರು ನಮಗೆ ಯಾವದೇ ನೋಟಿಸ್ ಕೊಟ್ಟಿರಲಿಲ್ಲ. ಕೆ.ಇ.ಬಿಯವರು ಸದ್ರಿ ವಿದ್ಯುತ್ ಕನೆಕ್ಷನ್ ತೆಗೆದಿದ್ದರಾ ಎಂದರೆ ಸಾಕ್ಷಿ ಅದಕ್ಕೆ ವಿದ್ಯುತ್ ಸಂಪರ್ಕ ಇರಲಿಲ್ಲ ಎಂದು ನುಡಿಯುತ್ತಾರೆ. ಸದ್ರಿ ಶೆಡ್ ಗೆ ಅದರ ಸುತ್ತಲೂ ಗೋಡೆ ಇದೆ. ಅದರ ಮೇಲೆ ತಗಡಿನ ಶೀಟ್ ಗಳನ್ನು ಹಾಕಲಾಗಿದೆ. ಸದ್ರಿ ಶೀಟಗಳನ್ನು ಹಾಕಿ ಸುಮಾರು 2 ವರ್ಷಗಳಾಯಿತು. ಅದಕ್ಕಿಂತ ಮೊದಲು ತೆಂಗಿನ ಮಾಡನ್ನು ಹಾಕಲಾಗಿತ್ತು. ಸದ್ರಿ ಇಮಾರತು ಸರ್ವೆ ನಂ. 2/7 ರಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದ್ರಿ ಶೆಡ್ಡಿನ ಕೇವಲ 2 ಅಡಿಯಷ್ಟು ಜಾಗ ಮಾತ್ರ ಸದ್ರಿ ಜಾಗದಲ್ಲಿ ಬರುತ್ತದೆ ಎಂದರೆ ಸರಿಯಲ್ಲ.

9 ನೇ ಪ್ರತಿವಾದಿಯ ತಾಯಿ ದಿಃ 02.02.2022 ರಂದು ಸರ್ವೆ ನಂ. 2/7ರಲ್ಲಿ ನಾವು ಅತಿಕ್ರಮ ಪ್ರವೇಶ ಮಾಡಿದ್ದೇವೆ ಎಂದು ಪೋಲಿಸರಿಗೆ ದೂರು ಕೊಟ್ಟಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರಿದು ಅದನ್ನು ತಪ್ಪಾಗಿ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಸದ್ರಿ ಪ್ರಕರಣದಲ್ಲಿ ನಾನು ಪೋಲಿಸ್ ಠಾಣೆಗೆ ಹೋಗಿದ್ದೆ. ಪೋಲಿಸರು ಅದು ಸಿವಿಲ್ ಪ್ರಕರಣವಾದ ಕಾರಣ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎಂದು ಹಿಂಬರಹ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದ್ರಿ ಶೆಡ್ಡಿಗೆ ಸುಳ್ಳು ಮಾಹಿತಿಯನ್ನು ಕೆ.ಇ.ಬಿ ಯವರಿಗೆ ಕೊಟ್ಟು ವಿದ್ಯುತ್ ಸಂಪರ್ಕ ಪಡೆದಿದ್ದೆವು ಎಂದರೆ ಸರಿಯಲ್ಲ. ಆ ಕುರಿತು 9 ನೇ ಪ್ರತಿವಾದಿ ಕೆ ಇ ಬಿ ಯವರಿಗೆ ತಕರಾರನ್ನು ನೀಡಿದ್ದು ಕೆ ಇ ಬಿ ಯವರು ಪಂಚಾಯತಿಯಿಂದ ನಾವು ಪರವಾನಗಿ ಪಡೆದಿಲ್ಲ ಎಂದು ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿದ್ದರು ಎಂದರೆ ಸರಿಯಲ್ಲ. ಸರ್ವೆ ನಂ. 2/7 ಕ್ಕೆ ಲಗ್ತ ಇರುವ ಸರ್ವೆ ನಂ. 2/6 ರಲ್ಲಿ ಸದ್ರಿ ವಿದ್ಯುತ್ ಸಂಪರ್ಕದ ಕಂಬ ಈಗಲೂ ಇದೆ ಎಂದರೆ ಸರಿಯಲ್ಲ. ಅದು ದರ್ಗಾಕ್ಕೆ ಸಂಪರ್ಕ ನೀಡಿದ ಕಂಬ ಆಗಿರುತ್ತದೆ ಎಂದು ನುಡಿಯುತ್ತಾರೆ. ಅದೇ ಕಂಬದಿಂದ ಸುಳ್ಳು ಮಾಹಿತಿ ನೀಡಿ ನಾವು ಶೆಡ್ಡಿಗೆ ಸಂಪರ್ಕ ಪಡೆದಿದ್ದೇವೆ ಎಂದರೆ ಸರಿಯಲ್ಲ. ಸದರಿ ಶೆಡ್ ಮಾನವ ವಾಸಕ್ಕೆ ಯೋಗ್ಯ ಅಲ್ಲ ಎಂದರೆ ಸರಿಯಲ್ಲ. ಶೆಡ್ಡಿನ ಸುತ್ತಲೂ ಪ್ಲಾಸ್ಟಿಕ್ ಪೇಪರ್ ಹಾಕಿ ಮುಚ್ಚಲಾಗಿದೆ ಎಂದರೆ ಸರಿಯಲ್ಲ. ಸರ್ವೆ ನಂ. 2/7 ಶರಾವತಿ ನದಿ ದಡದಿಂದ ಸುಮಾರು 30 ಮೀ ದೂರ ಇದೆ. ಶರಾವತಿ ನದಿಯ ಯಾವ ದಿಕ್ಕಿಗೆ ಸದ್ರಿ ಜಾಗ ಇದೆ ಎಂದು ನನಗೆ ಗೊತ್ತಾಗುವುದಿಲ್ಲ. ಸದ್ರಿ ಸ್ಥಳದಲ್ಲಿ ನದಿ ಪೂರ್ವದಿಂದ ಪಶ್ಚಿಮದ ಕಡೆ ಹರಿಯುತ್ತದೆ. ಶರಾವತಿ ನದಿಯ ಬಲಭಾಗಕ್ಕೆ ತಾಗಿ ಸದ್ರಿ ಜಾಗ ಇದೆ ಎಂದರೆ ನನಗೆ ಗೊತ್ತಾಗುವುದಿಲ್ಲ. 9 ನೇ ಪ್ರತಿವಾದಿಯ ಮನೆ ಶರಾವತಿ ನದಿಯ ಎಡಭಾಗಕ್ಕೆ ಇದೆ ಎಂದರೆ ನಾನು ನೋಡಿರುವುದಿಲ್ಲ. ಶರವವತಿ ನದಿ ದಡದಿಂದ ಸುಮಾರು ಮುಕ್ಕಾಲು ಕಿ ಮೀ ದೂರ 9 ನೇ ಪ್ರತಿವಾದಿಯ ಮನೆ ಇದೆ ಎಂದರೆ ನಾನು ನೋಡಿರುವುದಿಲ್ಲ. 9 ನೇ ಪ್ರತಿವಾದಿ ದುಬೈಯಲ್ಲಿ ಎಷ್ಟು ವರ್ಷಗಳಿಂದ ವಾಸವಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ನಾನೂ ಕೂಡ ದುಬೈಯಲ್ಲಿ ವಾಸವಿದ್ದೇನೆ. ನಾನು ಮಾತ್ರ ಅಲ್ಲಿಗೆ ಹೋಗಿದ್ದು ನನ್ನ ಕುಟುಂಬ ಇಲ್ಲಿಯೇ ಇದೆ. 9 ನೇ ಪ್ರತಿವಾದಿ ಖರೀದಿ ಮಾಡಿದ ಆಸ್ತಿಯಲ್ಲಿ ನನಗೆ ಯಾವದೇ

ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.  8 ನೇ ಪ್ರತಿವಾದಿ ಆಕೆಗೆ ಸೇರಿದ ಜಾಗವನ್ನು 9 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾಳೆ ಎಂದರೆ ಸರಿಯಲ್ಲ.

ನಮ್ಮ ಊರಿನಲ್ಲಿ ಒಂದು ಗುಂಟೆ ಜಾಗಕ್ಕೆ ಎಷ್ಟು ಮೌಲ್ಯ ಇದೆ ಎಂದು ನನಗೆ ಗೊತ್ತಿಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾವರ.